ಓ.ಎಸ್.183/2021 ಪಿ.ಡಬ್ಲು-1
ಮದನ ತಂದೆ ಗುಲ್ಲುಸಾಬ

ದಿ.01-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

*ಮುಂದುವರೆದ ಪಾಟೀ ಸವಾಲು : ಶ್ರೀ. ವಿ.ಜೆ.ಕೆ   ವಕೀಲರಿಂದ :-*

ನಾನು ದಾಖಲಾತಿಗಳನ್ನು ನೋಡಿ ಜಮೀನು ಖರೀದಿಸಿರುತ್ತೇನೆ. ಆ ಸಮಯದಲ್ಲಿ ಪಹಣಿ ಹನುಮಂತರವರ ಹೆಸರಿನಲ್ಲಿ ಇತ್ತು. ಪಹಣಿಯಲ್ಲಿ ಆ ಸಮಯದಲ್ಲಿ ಭೀಮವ್ವ ಮತ್ತು ಸಿದ್ದವ್ವರ ಹೆಸರು ಇರಲಿಲ್ಲ. ನಾನು ಜಮೀನು ಮಾರಾಟ ಮಾಡುತ್ತೇನೆ ಎಂದು ಹೇಳಿದ ನಂತರ ಒಂದು ತಿಂಗಳಲ್ಲಿ ದಾಖಲೆಗಳನ್ನು ನೋಡಿರುತ್ತೇನೆ. ಹನುಮಂತನ ಕುಟುಂಬದ ಬಗ್ಗೆ ವಿಚಾರ ಮಾಡಿ ಜಮೀನು ಖರೀದಿಸಿರುತ್ತೇನೆ. ಜಮೀನು ಖರೀದಿ ಮಾಡುವ ಪೂರ್ವದಲ್ಲಿ ಹನುಮಂತ ಮತ್ತು ಅವರ ಹೆಂಡತಿ ಬೇರೆಯಾಗಿ ಇದ್ದರು ಮತ್ತು ಭೀಮವ್ವ ಮತ್ತು ಸಿದ್ದವ್ವ ಕೂಡ ಬೇರಯಾಗಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಹನುಮಂತರವರಿಗೆ ದುಶ್ಚಟಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾತುಕತೆ ನಸೀರಮಿಯಾ ರವರ ಮನೆಯ ಮುಂದೆ ಆಗಿರುತ್ತದೆ. ಆ ದಿನ ಸೋಮಲಿಂಗಪ್ಪ, ನಸೀರಅಹಮ್ಮದ, ಹನುಮಂತಪ್ಪ, ಭೀಮವ್ವ, ಕರಡಕಲ್ ನವರು ಒಬ್ಬರು ಇದ್ದರು. ಮಾತುಕತೆಯಾದ ಒಂದು ತಿಂಗಳಿಗೆ ಖರೀದಿಯಾಗಿರುತ್ತದೆ.

2. ರೂ.48,000/- ಗೆ ಖರೀದಿಯಾಗಿರುತ್ತದೆ. ಖರೀದಿ ದಿನಾಂಕ ಹೇಳಲು ನೆನಪಿಲ್ಲ. ದಾವೆ ಇರುವ ಕುರಿತು ಹನುಮಂತಪ್ಪರವರನ್ನು ನಾನು ಖರೀದಿ ಸಮಯದಲ್ಲಿ ವಿಚಾರಣೆ ಮಾಡಿರುವುದಿಲ್ಲ. ನಾವು ಖರೀದಿ ಮಾಡುವ ಮೊದಲೇ ಹನುಮಂತಪ್ಪನ ಹೆಂಡತಿ ಮತ್ತು ಮಕ್ಕಳು ಕೇಸು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸು ಏನು ಆಗಿರುತ್ತದೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಮೇಲೆ ಎಫ್.ಡಿ.ಪಿ ಹಾಕಿ ಅದರಲ್ಲಿ ಅಳತೆ ಮಾಡಲು ಜಮೀನಿಗೆ ನಮಗೆ ನೋಟಿಸು ನೀಡಿ ತಹಶಿಲ್ದಾರ ಕಚೇರಿಯವರು ಬಂದಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದ ಕಾರಣ ಅಳತೆ ಮಾಡಲು ಬಂದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಹನುಮಂತಪ್ಪನ ಹೆಸರಿನಲ್ಲಿ ಎಷ್ಟು ವರ್ಷಗಳಿಂದ ಪಹಣಿಗಳನ್ನು ನೋಡಿರುತ್ತೇನೆ ಎಂದು ಹೇಳಲು ಗೊತ್ತಿಲ್ಲ. ಖರೀದಿ ಹಣವನ್ನು ಹನುಮಂತ ಮತ್ತು ಭೀಮವ್ವರವರು ಒಟ್ಟಿಗೆ ಬಂದು ತೆಗೆದುಕೊಂಡು ಹೋಗಿರುತ್ತಾರೆ. ಸಿದ್ದಮ್ಮರವರ ಸಹಿಯನ್ನು ಖರೀದಿ ಪತ್ರಕ್ಕೆ ನಾವು ಪಡೆದಿಲ್ಲ. ಅವರ ಬಗ್ಗೆ ನಮಗೆ ಗೊತ್ತಿರಲಿಲ್ಲ. ಮಾತುಕತೆ ಸಮಯದಲ್ಲಿ ಸಿದ್ದಮ್ಮ ಇರಲಿಲ್ಲ. ಹನುಮಂತ ಮತ್ತು ಭೀಮವ್ವರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನಾನು ವಿಚಾರ ಮಾಡಿಲ್ಲ. ಹನುಮಂತನ ಮಕ್ಕಳು ಉಚ್ಚ

ನ್ಯಾಯಾಲಯಕ್ಕೆ ಕೇಸು ಹಾಕಿದ ವಿಚಾರ ನನಗೆ ಗೊತ್ತಿಲ್ಲ. ಭೀಮವ್ವ ಮತ್ತು ಸಿದ್ದಮ್ಮ ಸದರಿ ಕೇಸಿನ ವಿಚಾರ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಹನುಮಂತ, ಹನುಮಂತನ ಹೆಂಡತಿ, ಮಕ್ಕಳು, ಸಿದ್ದಮ್ಮ, ಭೀಮವ್ವ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ನಾವು ಈಗ ಜಮೀನು ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ 25 ವರ್ಷದಿಂದ ನಾವೇ ಮಾಡಿಕೊಂಡು ತಿನ್ನುತ್ತಿದ್ದೇವೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.